ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ. : 2419677/2419361
ಫ್ಯಾಕ್ಸ್: 0821-2419363/2419301

e-mail: Registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಎಸಿ4/29/2015-16

ದಿನಾಂಕ: 09.11.2015

## ಸುತ್ತೋಲೆ

ವಿಷಯ: 2014-15 ಮತ್ತು 2015-16ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದಂತಹ SC/ST ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಪಾವತಿಸುವ ಬಗ್ಗೆ.

*****

2014-15ನೇ ಶೈಕ್ಷಣಿಕ ಸಾಲಿನ SC/ST ವಿದ್ಯಾರ್ಥಿಗಳ ಪ್ರವೇಶ ಶುಲ್ಕವು ಸರ್ಕಾರದ ಸಂಬಂಧಪಟ್ಟ ಇಲಾಖೆಯಿಂದ ಮರುಭರಿಕೆಯಾಗಿದ್ದರೂ, ಕೆಲವು ಕಾಲೇಜಿನವರು ಇದುವರೆವಿಗೂ ವಿಶ್ವವಿದ್ಯಾನಿಲಯಕ್ಕೆ ಜಮಾ ಮಾಡದೆ ಇರುವುದು ವಿಶ್ವವಿದ್ಯಾನಿಲಯದ ಗಮನಕ್ಕೆ ಬಂದಿದ್ದು, ಈ ಸಂಬಂಧ, ವಿಶ್ವವಿದ್ಯಾನಿಲಯದ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸುವುದೇನೆಂದರೆ, 2014-15ನೇ ಶೈಕ್ಷಣಿಕ ಸಾಲಿನ SC/ST ವಿದ್ಯಾರ್ಥಿಗಳ ಶುಲ್ಕವನ್ನು ಈಗಾಗಲೇ ಪಾವತಿಸಿದ್ದಲ್ಲಿ ಚಲನ್ ಪ್ರತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿಯೂ, ಒಂದುವೇಳೆ ಪಾವತಿಸದಿದ್ದಲ್ಲಿ ಅಂತಹ ಕಾಲೇಜಿನವರು ತಕ್ಷಣ ಪಾವತಿಸಿ ಚಲನ್ ಪ್ರತಿಯನ್ನು ಸಲ್ಲಿಸಿ 2015-16ನೇ ಶೈಕಣಿಕ ಸಾಲಿನ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಪಟ್ಟಿಯನ್ನು ಪಡೆಯುವಂತೆ, ಇಲ್ಲದಿದ್ದಲ್ಲಿ, ಅಂತಹ ಕಾಲೇಜಿನ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿಯಲಾಗುವುದೆಂದು ತಿಳಿಸುತ್ತಾ ಹಾಗೂ 2015-16ನೇ ಶೈಕ್ಷಣಿಕ ಸಾಲಿನ SC/ST ವಿದ್ಯಾರ್ಥಿಗಳ ಪ್ರವೇಶ ಶುಲ್ಕವು ಸರ್ಕಾರದಿಂದ ಮರುಭರಿಕೆಯಾದ ತಕ್ಷಣವೇ ವಿಶ್ವವಿದ್ಯಾನಿಲಯಕ್ಕೆ ಪಾವತಿಸಲು ಸಹ ಈ ಮೂಲಕ ತಿಳಿಸಿದೆ. ನಂತರ, ಈ ಕೆಳಕಂಡ ಶುಲ್ಕಗಳ ಪಾವತಿಸಿರುವ ವಿವರವನ್ನು ನೀಡಬೇಕಾಗಿಯು ಸಹ ಸೂಚಿಸಿದೆ.

1. ಶತಮಾನೋತ್ಸವ ಸಮಾರಂಭದ ಶುಲ್ಕ(ಇದುವರೆವಿಗೂ ವಿಶ್ವವಿದ್ಯಾನಿಲಯಕ್ಕೆ ಪಾವತಿಸದ ಕಾಲೇಜಿನವರು).
2. ದಂಡ ಶುಲ್ಕ(ಸಮರ್ಪಕವಾಗಿ ವಿಶ್ವವಿದ್ಯಾನಿಲಯಕ್ಕೆ ಪಾವತಿಸದ ಕಾಲೇಜಿನವರು).

**ಮೇಲಿನ ಸೂಚನೆಯನ್ನು ಕಾಲೇಜು/ಸಂಸ್ಥೆಯವರು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.**

**ಕುಲಸಚಿವರಿಂದ ಕರಡು ಅನುಮೋದಿಸಿದೆ.**

ಉಪಕುಲಸಚಿವ(ಶೈಕ್ಷಣಿಕ)

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಿ.ಎ./ಬಿ.ಪಿ.ಎ./ಬಿ.ಸಿ.ಎಸ್/ ಬಿ.ಎಸ್‌ಸಿ./ ಬಿ.ಕಾಂ./ಬಿ.ಬಿ.ಎಂ./ಬಿ.ಟಿ.ಹೆಚ್./ಬಿ.ಎಸ್.ಡಬ್ಲ್ಯೂ./ಬಿ.ಫೈನ್.ಆರ್ಟ್ಸ್/ಬಿ.ಎ.(ಪ್ರದರ್ಶನ ಕಲೆ)/ಬಿ.ಎಸ್ಸಿ.(ವಾಕ್ ಮತ್ತು ಶ್ರವಣ) ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕುಲಸಚಿವ (ಪರೀಕ್ಷಾಂಗ), ಮೈವಿವಿ, ಮೈಸೂರು - ಮಾಹಿತಿಗಾಗಿ,
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು,ಮಾ.ಗಂ.,ಮೈಸೂರು
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
8. ಪ್ರೊ.ಜಿ.ಹೇಮಂತ್ ಕುಮಾರ್, ಸಂಯೋಜಕರು, ಐ.ಸಿ.ಡಿ ವಿಭಾಗ, ಮಾ.ಗಂ., ಮೈಸೂರು-ಮೈ.ವಿ.ವಿ. ವೆಬ್‌ಸೈಟ್‌ನಲ್ಲಿ ಪ್ರಕಟಣೆ ಮಾಡಬೇಕಾಗಿ ಕೋರಿದೆ.
9. ಆಡಳಿತ ಶಾಖೆ/ಪರೀಕ್ಷಾಂಗ ವಿಭಾಗದ ಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು/ಶೈಕ್ಷಣಿಕ ವಿಭಾಗದ ಎಲ್ಲಾ ವಿಷಯ ನಿರ್ವಾಹಕರಿಗೆ, ಮೈ.ವಿ.ವಿ., ಮೈಸೂರು.
10. ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈವಿವಿ, ಮೈಸೂರು.